ಕೊಳ್ಳೇಗಾಲ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆ

5085 - ಶ್ರೀ ನಂಜುಂಡಸ್ವಾಮಿ ಜಿ.ಎನ್. (ಕೊಳ್ಳೇಗಾಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲ ಕಡೆಗದ್ದೆಯಲ್ಲಿ ಏತ ನೀರಾವರಿ ಯೋಜನೆ ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ, ಇದು ಯಾವ ಹಂತದಲ್ಲಿದೆ? ಎಂದಿನಿಂದ ಪ್ರಾರಂಭವಾಗುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) 2000-01ನೇ ಸಾಲಿನ ಆಯವ್ಯಯದಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಸತ್ತೇಗಾಲ ಕಡೆಗದ್ದೆಯಲ್ಲಿ ಏತ ನೀರಾವರಿ ಯೋಜನೆ ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಇರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಡಿ.ಪಿ.ಎ.ಆರ್.ದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು

5086 - ಶ್ರೀ ನಂಜುಂಡಸ್ವಾಮಿ ಜಿ.ಎನ್. (ಕೊಳ್ಳೇಗಾಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖಾ ವ್ಯಾಪ್ತಿಗೆ ಬರುವ ಶಾಖೆಗಳಲ್ಲಿ ಯಾವ ಯಾವ ನೌಕರರು ಎಷ್ಟೆಷ್ಟು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ? (ಹೆಸರು, ಹುದ್ದೆ, ಅವಧಿಯ ಪೂರ್ವ ವಿವರಗಳನ್ನು ಒದಗಿಸುವುದು)

ಆ) ಈ ರೀತಿ ಇಲಾಖೆಯೊಂದರಲ್ಲೇ ಹೆಚ್ಚು ಕಾಲ ಮುಂದುವರಿಸಲು ಕಾರಣಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಸಿ.ಆ.ಸು. ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಪೂರ್ಣ ವಿವರಗಳನ್ನು ವೃಂದವಾರು ಅನುಬಂಧ-1 ರಿಂದ 6ರಲ್ಲಿ ನೀಡಲಾಗಿದೆ.

ಆ) ಕೆಲವೊಂದು ಪ್ರಕರಣಗಳಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಹೆಚ್ಚು ಕಾಲ ಮುಂದುವರಿಸಲಾಗಿದೆ.